ತಂಗಿಯನ್ನು ಕಂಡು ವನಜಳ ಕರುಳು ಕೊರೆಯಿತು. ಎಷ್ಟು ಸೊಗಸಾಗಿದ್ದ ಚಂದನದ ಗೊಂಬೆ, ಈ ಹುಚ್ಚಿನಲ್ಲೂ, ಸೌಂದರ್ಯ ಕುರೂಪಕ್ಕೆ ತಿರುಗಿಲ್ಲ. ಹೌದು, ಕಣ್ಣಿನ ಹೊಳಪು ಕೂಡ ಹುಚ್ಚು ಹೆಚ್ಚಿದಂತೆಲ್ಲಾ ತೀಕ್ಷ್ಣವಾಗುತ್ತಲಿದೆ. ಅದೇಕೆ?... ತಾನೇ ಪ್ರಶ್ನಿಸಿಕೊಂಡಳು. ಅದು ಹುಚ್ಚಿನ ಹೊಳಪು... ಈ ಹುಚ್ಚು ಹೀಗೆಯೇ ದಿನೇ ದಿನೇ ಹೆಚ್ಚಾಗುತ್ತಾ ಹೋಗುತ್ತಿದೆ. ಆರೇಳು ವರ್ಷಗಳ ಹಿಂದೆ ಅವಳು ಮದುವೆಯಾದಾಗ ಇಂಥ ನಗೆ, ಹುಚ್ಚು ಹಾಡು ಇರಲಿಲ್ಲ. ಏನೋ ಒಂದು ರೀತಿ ಮಾತು ಕಮ್ಮಿಯಾದ, ತನ್ನಲ್ಲೇ ತಾನು ಚಿಂತಿಸಿಕೊಳ್ಳುವ, ಏನೂ ಕಲಿಯದ ಆದರೆ ಸಕ್ಕರೆ ಅಚ್ಚಿನಂಥ ಸುಂದರ ರೂಪವುಳ್ಳ ಹೆಣ್ಣಾಗಿದ್ದವಳು.

ಸೋದರಮಾವನ ಮಗನೇ ಅವಳ ಕೈ ಹಿಡಿಯಲು ಮುಂದೆ ಬಂದ. ಆ ವೇಳೆಗೆ ತಂದೆ ತಾಯಿ ಕಣ್ಣು ಮುಚ್ಚಿಕೊಂಡಾದ್ದರಿಂದ ವನಜಳೇ ನಿಂತು ಅವರಿಬ್ಬರ ಮದುವೆ ಮಾಡಿ ಮುಗಿಸಿದ್ದಳು.

ಚಿಕ್ಕಂದಿನಿಂದ ಒಂದು ಬೇರೆಯೇ ರೀತಿ ಮನೋಭಾವ ತೋರುತ್ತಿದ್ದ ತಂಗಿಯ ಚಿತ್ತದ ಬಗ್ಗೆ ಒಂದು ರೀತಿ ಅನುಮಾನವೇ ಇತ್ತು ವನಜಳಿಗೆ. ಮದುವೆಯಾದ ಮೇಲೆ, ಮಕ್ಕಳಾದ ಮೇಲೆ ಸೂಟಿಯಾಗುವಳೇನೊ ಎಂದು ಕಾದು ನೋಡಿದಳು. ಮಕ್ಕಳೇನೊ ಆದವು. ಆದರೆ ಅವು ಅಳಿದಳಿದು ಹೋದಂತೆಲ್ಲಾ ಅವಳ ಬುದ್ಧಿಭ್ರಮಣೆ ಹೆಚ್ಚಾಗುತ್ತಾ ಬಂದಿತು.

'ತಗೊ, ತಿನ್ನು...' ಎಂದು ಒಬ್ಬಟ್ಟನ್ನು ಅವಳತ್ತ ನೀಡಿದಳು. ಅದನ್ನು ಕೈಗೆ ತೆಗೆದುಕೊಂಡವಳೇ ಜಾನಕಿ ಬಾಯ್ಬಿಟ್ಟಳು.

'ತುಪ್ಪ ಇಲ್ವೆ?'

ಬಾಲ್ಯದ ಭೋಗದ ವಾಸನೆ ಇನ್ನೂ ಮರೆಯದ ತಂಗಿಯನ್ನು ಕಂಡು ವನಜಳಿಗೆ ಈಗ ತುಂಬಾ ನಗೆ ಬಂದಿತು.

'ಹುಂ, ಇದೆ... ತುಪ್ಪ, ಬಿಸಿ ಹಾಲು, ಬೆಳ್ಳಿ ತಟ್ಟೇಲಿ ಹಾಕ್ಕೊಡ್ತೀನಿ... ತಡಿ!...'

ವನಜಳ ನಗೆಗೆ ಪ್ರತ್ಯುತ್ತರ ನಗೆ, ಹುಚ್ಚು ಬಾಯಲ್ಲಿ.

'ಮಗೂನ ಯಾಕೆ ಅಳಸ್ದೆ?...'

'ನಾನಳಸ್ಲಿಲ್ಲಪ್ಪ ಸದ್ಯ.... ಹಸ್ವಾಗಿತ್ತೊ ಏನೊ. ಬಿದ್ದಮೇಲೆ ಅಳ್ತಾ ಇತ್ತು... ಅದಕ್ಕೇ ಹಪ್ಪಳ ಕೊಟ್ಟೆ... ಅಳ್ತು.'

'ತುಂಬಾ ಒಳ್ಳೆ ಕೆಲ್ಸ ಮಾಡ್ದೆ... ಬಿದ್ದದ್ದಕ್ಕೆ ಅತ್ತಿದೆ... ಎಲ್ಲಿ, ಗಾಯ ಆಯ್ತಾ?...'

'ಹೂಂ... ಮಂಡೀಲಿ ಘಾಯವಾಗಿ ರಕ್ತ ಬಂತು. ನೋಡು ನನ್ನ ಸೆರಗ್ನಲ್ಲಿ ಒರಸ್ದೆ...' ಎಂದು ಸೆರಗು ತೋರಿದಳು. ಅವಳು ಹೇಳಿದ ರೀತಿ ಕಂಡು ವನಜಳಿಗೆ ಭಯವಾಯಿತು. ಮಗುವಿನ ಕೈಕಾಲನ್ನೆಲ್ಲಾ ಪರೀಕ್ಷಿಸಿ, ತಂಗಿಯ ಸೀರೆ ಸೆರಗು ನೋಡಿದಳು. ಎರಡೂ ಹೇಳಿದವು ಅವಳ ಮುದ್ದಿನ ರಾಜಕುಮಾರನಿಗೆ ಹೆಚ್ಚಾದ ನೋವು ಏನೂ ಆಗಿಲ್ಲವೆಂದು. ಅವಳಿಗೆ ನೆಮ್ಮದಿ ಎನ್ನಿಸಿತು.

'ನಾನು ಕೆಲ್ಸಕ್ಕೆ ಹೋಗಿರುವಾಗ ಸ್ವಲ್ಪ ನಿಗಾ ಇಟ್ಟು ನೋಡ್ಕೊ ಮಗೂನ... ಕಂಡದ್ದು ತಿನ್ನಕ್ಕೆ ಕೊಡ್ಬೇಡ... ಬೀಳಸ್ಬೇಡ... ತಿಳೀತೆ?...' ಈ ಮಾತು ಈಗ ಹೇಳಿದಂತೆಯೇ ಪ್ರತಿನಿತ್ಯ ರಿಕಾರ್ಡ್ ಹಚ್ಚಿದಂತೆ ಹೇಳಿ ಹೋಗುತ್ತಿದ್ದಳು ವನಜ. ಆದರೆ ಪ್ರತಿ ಒಂದು ದಿನ ಒಂದಲ್ಲ ಒಂದು ನಡೆಸಿಯೇ ಇರುತ್ತಿದ್ದಳು ಜಾನಕಿ. ಅವಳಿಗೆ ಜಾನಕಿ ಬಗ್ಗೆಯೇ ನಂಬಿಕೆ ಇರುತ್ತರಲಿಲ್ಲ.

ವನಜ ಕ್ಲುಪ್ತವಾಗಿ ಮಗುವಿನ ಹೊಟ್ಟೆಗೆ ಹಾಕುತ್ತಿದ್ದಳು. ಅತ್ತಾಗ ಜಾನಕಿ ಕಂಡ ಕಂಡದ್ದನ್ನೆಲ್ಲಾ ಮಗುವಿನ ಬಾಯಿಗೆ ಗಿಡಿಯುತ್ತಿದ್ದಳು. ಬಕಾಸುರನ ಹಸಿವು ಹೊತ್ತ ಆ ನರಪೇತಲ ಮಗು